ವಿಫಲರಾದ ವಕೀಲರು ಸಂಬಂಧವಿಲ್ಲದ ಹಳೇ ತೀರ್ಪುಗಳನ್ನು ಉಲ್ಲೇಖಿಸುತ್ತಾ ಕನ್‌ಫ್ಯೂಸ್ ಮಾಡುವ ತಂತ್ರವೆಂದರೂ ಅಡ್ಡಿಯಿಲ್ಲ. ಟಿ.ಎನ್. ಸೀತಾರಾಮರ ಸೀರಿಯಲ್ಲಿನ ಕೋರ್ಟು ಕಲಾಪದಂತೆ ಎಳೆಯುವ ಉದ್ದೇಶವೇನೂ ನನಗಿಲ್ಲ. ಅಲ್ಲದೆ, ನನ್ನ ಮತ್ತು ಪುರಾಣಿಕ ಡಾಕ್ಟರರ ದವಾಖಾನೆಯ ಸಂಬಂಧ ಕೋರ್ಟು ಮೆಟ್ಟಿಲೇರಿದ ಪ್ರಕರಣವೂ ಅಲ್ಲ ಎಂಬುದು ನಿಮಗೂ ಗೊತ್ತು. ಈಗ ಅಸಲಿ ವಿಷಯಕ್ಕೆ ಬರುವೆ.

ದೂರದಿಂದ ಬೀಗರೂ ಆಗಬೇಕಾದ ಪುರಾಣಿಕ ಡಾಕ್ಟರು ನನ್ನೊಂದಿಗೆ ನಗೆಚಾಟಿಕೆ ಮಾಡುತ್ತಾ ನಾನೊಬ್ಬ ರೋಗಿ ಎಂಬುದನ್ನೇ ಮರೆಯುತ್ತಿದ್ದರು. ಗಾಯಕ್ಕಿಂತ ಗಾಯ ಮಾಡಿಕೊಂಡ ಪ್ರಸಂಗದ ಬಗ್ಗೆ ಅವರಿಗೆ ಹೆಚ್ಚು ಕುತೂಹಲ. ನನ್ನ ಮುಗ್ಧ ಮಾತುಗಳಲ್ಲಿ ಎಡವಿಬಿದ್ದ ಘಟನೆಯ ವಿವರಗಳನ್ನು ಕೇಳುತ್ತಾ ಅದಕ್ಕೆ ತಮಾಷೆ ಲೇಪಿಸಿ ನಗುತ್ತಿದ್ದರು. ಮಾತಿನ ಮಧ್ಯೆ ದವಾಖಾನೆ ಎದುರಿನ ಉಡುಪಿ ಹೋಟೆಲಿನಿಂದ ಗರಿಗರಿ ಚಕ್ಕುಲಿಯ ಪೊಟ್ಟಣ ಬರುತ್ತಿತ್ತು. ಆ ಸನ್ನಿವೇಶವೇ ಈ ಪ್ರಬಂಧದ ಕ್ಲೈಮ್ಯಾಕ್ಸ್ ಎಂದು ಭಾವಿಸಿದರೆ ಅದು ನಿಮ್ಮ ದುಡುಕು. ಚಕ್ಕುಲಿ ಆಸೆಯೇ ನನ್ನ ರೋಗದ ಆವಾಹನೆಗೆ, ಗಾಯದ ರಾಹುಗನ್ನಡಿಗೆ ಕಾರಣ ಎಂಬ ನಿಮ್ಮ ಊಹೆಯೂ ನಿರಾಧಾರ.

ಡಾಕ್ಟರು ಚಕ್ಕುಲಿ ತರಿಸುತ್ತಿದ್ದರಷ್ಟೇ, ನನಗೆ ಕೊಡುತ್ತಿರಲಿಲ್ಲ! ಚಕ್ಕುಲಿ ಕೊಡಲು ಅವರದೊಂದು ಷರತ್ತು ಇರುತ್ತಿತ್ತು. ವಿಶಾಲವಾದ ಕಟ್ಟಿಗೆ ಮೇಜಿನ ಹಿಂದೆ ಅವರು ಕುಳಿತ ಕುರ್ಚಿ ಬಳಿ ಸಾಗಿ ನಾನು ಅವರೆಡೆಗೆ ಮುಖ ಚಾಚಬೇಕು. ಅಷ್ಟೊತ್ತಿಗೆ ಅವರು ಆಗಿನ ಕಾಲದ ದಪ್ಪನೆಯ ಇಂಕ್ ಪೆನ್ನಿನ ಕ್ಯಾಪ್ ತೆಗೆದು ಒಂದೆರಡು ಬಾರಿ ಪಕ್ಕದಲ್ಲಿ ಕೊಡವಿ ನಸುನಗುತ್ತಾ ಒಂದು ನಮೂನೆ ಆಪರೇಷನ್ನಿಗೆ ಸಿದ್ಧರಾಗುತ್ತಿದ್ದರು.

ಮರುಘಳಿಗೆ ವೈದ್ಯರು ಕಲಾವಿದರ ಅವತಾರ ತಾಳಿ ನನ್ನ ಮೂಗಿನ ಕೆಳಗಿನಿಂದ ಆರಂಭಿಸಿ ನುಣುಪು ಗಲ್ಲದವರೆಗೆ ಪೆನ್ನಿನಿಂದ ತಿದ್ದಿತೀಡಿ ಗಿರಿಜಾಮೀಸೆ ಮೂಡಿಸುವುದರಲ್ಲಿ ಅವರಿಗೆ ಅದೆಂಥದೋ ಉಮೇದು. ನನಗೋ ತ್ರಿವಳಿ ಅನುಭವ; ಗಲ್ಲದಲ್ಲಿ ಪೆನ್ನಿನ ಗೆರೆಗಳ ಕಚಗುಳಿ, ಮೂಗಿನಲ್ಲಿ ಚಕ್ಕುಲಿಯ ಪರಿಮಳ, ನಾಲಗೆಯಲ್ಲಿ ನೀರಿನ ಜುಳುಜುಳು. ಕೊಟ್ಟಕೊನೆಗೆ ಕಾಂಪೌಂಡರ್ ಎಡೆಗೆ ಅವರು ಸೂಚನೆಯ ನೋಟ ಬೀರಿದ್ದೇ ತಡ, ಆತ ದಿನಪತ್ರಿಕೆಯ ಚೌಕಾಗಿ ಕತ್ತರಿಸಿದ ತುಂಡು ಹಾಳೆಯಲ್ಲಿ ಬೆಣ್ಣೆಯ ತುಣುಕಿನಂತೆ ಮುಲಾಮು ಹಾಕಿ ಮಡಚಿಕೊಡುತ್ತಿದ್ದ.

ಕಾಲಿಗೆ ಗಾಯ ಮಾಡಿಕೊಂಡು ದವಾಖಾನೆ ಪ್ರವೇಶಿಸಿದ ಪುಟ್ಟ ಬಾಲಕನೊಬ್ಬ ಮೀಸೆಹೊತ್ತ ಗಂಡಸಾಗಿ ಹೊರಬೀಳುವ ಪ್ರಸಂಗವಿದು. ಒಂದು ಕೈಯಲ್ಲಿ ಮುಲಾಮು ಚೀಟಿ, ಇನ್ನೊಂದರಲ್ಲಿ ಚಕ್ಕುಲಿ ಪೊಟ್ಟಣ ಹಿಡಿದು ನಡೆದುಬರುವಾಗ ನಾನು ನನಗರಿವಿಲ್ಲದೇ ಬಯಲಾಟದ ಬಲಭೀಮನಂತೆ ಹೆಜ್ಜೆ ಹಾಕುತ್ತಿದ್ದೆ. ಮನೆಯ ಮುಂದೆ ಕಾಯುತ್ತಿದ್ದ ಗೆಳೆಯರ ಗುಂಪಿನಲ್ಲಿ ಇಂಕುಮೀಸೆಯ ಪಾತ್ರಧಾರಿ ವೀರಾವೇಶದಿಂದ ಕುಣಿಯುತ್ತಿದ್ದರೆ ಓಣಿಯ ಜನರೆಲ್ಲಾ ಪ್ರೇಕ್ಷಕರು, ಕಲಾಪೋಷಕರು.

ಹೀಗೆ ಆರಂಭವಾದ ಇಂಕಿನೊಂದಿಗಿನ ನನ್ನ ನಂಟು ಬದುಕಿನಲ್ಲಿ ಬಹಳಷ್ಟು ಚಿತ್ತಾರಗಳಿಗೆ ಕಾರಣವಾಗಿದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆರಂಭಿಕ ತರಗತಿಗಳಲ್ಲಿ ಕೇವಲ ಒಂದು ಮಗ್ಗಿ ಪುಸ್ತಕ, ತುಂಡು ಬಳಪ ಮತ್ತು ಕಟ್ಟಿಗೆ ಕಟ್ಟಿನ ಸೀಳುಪಾಟಿಯಲ್ಲೇ ವಿದ್ಯಾಭ್ಯಾಸ ಮಾಡುವ ಸವಾಲನ್ನು ನನ್ನ ವಾರಿಗೆಯವರೆಲ್ಲಾ ಎದುರಿಸಿದ್ದೆವು. ಹಿರಿಯರು ಪೆನ್ನು, ಪೇಪರನ್ನು ಅಪ್ಪಿತಪ್ಪಿಯೂ ನಮಗೆ ಮುಟ್ಟಿಸಿಗೊಡುತ್ತಿರಲಿಲ್ಲ. ಅವುಗಳನ್ನು ಚಿಕ್ಕವರ ಕೈಗೆ ಸಿಗದಂತೆ ಎತ್ತರದ ಸ್ಥಳದಲ್ಲಿ ಬಚ್ಚಿಡುತ್ತಿದ್ದರು. ಇದು ಅಮಾಯಕ ಮಕ್ಕಳ ವಿರುದ್ಧ ಶಿಕ್ಷಕರು ಮತ್ತು ಪೋಷಕರು ಜಂಟಿಯಾಗಿ ರೂಪಿಸಿದ ಕ್ರೂರ ಸಂಚಿನಂತೆ ಭಾಸವಾಗುತ್ತಿತ್ತು.

ನಾವು ಐದನೆಯ ತರಗತಿಗೆ ಬರುವಷ್ಟೊತ್ತಿಗೆ ಹಿರಿಯರಿಗೆ ತಮ್ಮ ತಪ್ಪಿನ ಅರಿವಾದಂತೆ